<u>ದಿನಾಂಕ : ***19-12-2025*** ರಂದು ಸಾಕ್ಷಿಗೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಮುಖ್ಯ ವಿಚಾರಣೆಃ *4* ನೇ ಎದುರುದಾರರ ಪರವಾಗಿ ಶ್ರೀ. ಆರ್ ಪಿ ಕೆ ವಕೀಲರಿಂದ</u>**

ನಾನು ಈ ದಿನ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಸಂಗತಿಗಳು ನಿಜ ಇದ್ದು, ನಾನೇ ಹೇಳಿ ಬರೆಸಿದ್ದು, ಅದರಲ್ಲಿನ ಸಹಿಗಳು ನನ್ನದೇ ಇರುತ್ತವೆ.

ನಾನು ಈ ಕೆಳಕಂಡ ದಾಖಲೆಗಳನ್ನು ಗುರುತಿಸುತ್ತೇನೆ.

ನಿಆರ್ -1ಃ ಅಧಿಕಾರ ಪತ್ರ

ನಿಆರ್ -2ಃ ವಿಮಾ ಪತ್ರ

ಅರ್ಜಿಯನ್ನು ವಜಾಗೊಳಿಸಬೇಕೆಂದು ಕೋರುತ್ತೇನೆ.

**ಪಾಟೀ ಸವಾಲು ಃ ಅರ್ಜಿದಾರರ ಪರವಾಗಿ ಶ್ರೀ ಬಿ ಎನ್ ಎಮ್ ವಕೀಲರಿಂದ**

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರಕ್ಕೆ ನಾನು ಮಾಹಿತಿ ನೀಡಿರುತ್ತೇನೆ. ನನ್ನ ತಕರಾರಿಗೆ ಕಂಪನಿಯ ಪರವಾಗಿ ಮ್ಯಾನೇಜರ ರವರು ಮಾಹಿತಿ ನೀಡಿರುತ್ತಾರೆ. ತಕರಾರಿನಲ್ಲಿ ಏನು ಸಂಗತಿಗಳನ್ನು ಬರೆದಿರುತ್ತಾರೆ ಎಂದು ಮಾಹಿತಿ ಇರುತ್ತದೆ. ಅಪಘಾತವಾದ ದಿನ ಟ್ರಕ್ ನಂ. ಕೆಎ-29 ಎ 5377 ಇದಕ್ಕೆ ನಮ್ಮ ಕಂಪನಿಯ ವಿಮೆ ಚಾಲ್ತಿಯಲ್ಲಿ ಇತ್ತು. ಅಪಘಾತವಾದ ದಿನ ಅಪಘಾತಪಡಿಸಿದ ವಾಹನವು ಎಲ್ಲಿಂದ ಎಲ್ಲಿಗೆ ಹೊರಟಿತ್ತು ಎಂದು ಹೇಳಲು ಆಗುವುದಿಲ್ಲ. ಅಪಘಾತಪಡಿಸಿದ ವಾಹನವು ಅಪಘಾತಪಡಿಸಿದ ದಿನ ಖಾಲಿಯಾಗಿ ಹೊರಟಿತ್ತು. ಅಪಘಾತವಾದ ನಂತರ ನಮ್ಮ ಕಂಪನಿಯಿಂದ ತನಿಖೆ ಮಾಡಲು ತನಿಖಾಧಿಕಾರಿಯನ್ನು ಕಳುಹಿಸಿರುತ್ತಾರೆ. ತನಿಖಾಧಿಕಾರಿಯು ತಮ್ಮ ವರದಿಯಲ್ಲಿ ಅಪಘಾತ ಪಡಿಸಿದ ವಾಹನವು ಖಾಲಿಯಾಗಿತ್ತಾ ಅಥವಾ ಲೋಡಿಂಗ ಇತ್ತಾ ಎಂದು ನಮೂದಿಸಿರುತ್ತಾರೆ ಎಂದರೆ ಸಾಕ್ಷಿದಾರರು ನಮೂದಿಸುವುದಿಲ್ಲ ಎಂದು ಹೇಳುತ್ತಾರೆ. ವಾಹನವು ಎಲ್ಲಿಂದ ಎಲ್ಲಿಗೆ ಹೊರಟಿತ್ತು ಎಂದು ತನಿಖಾಧಿಕಾರಿಯು ತಮ್ಮ ವರದಿಯಲ್ಲಿ ನಮೂದಿಸುವುದಿಲ್ಲ. ತನಿಖಾಧಿಕಾರಿಯು ತಮ್ಮ ವರದಿಯಲ್ಲಿ ಅಪಘಾತದಲ್ಲಿ ಎಷ್ಟು ಜನ ಮೃತರಾಗಿರುತ್ತಾರೆ ಎಂದು ನಮೂದಿಸಿರುತ್ತಾರೆ ಎಂದರೆ ಸಾಕ್ಷಿದಾರರು ನಮೂದಿಸುವುದಿಲ್ಲ ಎಂದು ಹೇಳುತ್ತಾರೆ. ತನಿಖಾಧಿಕಾರಿಯು ತಮ್ಮ ವರದಿಯಲ್ಲಿ ಎಲ್ಲ ಸಂಗತಿಗಳನ್ನು ನಮೂದಿಸಿದ್ದರೂ ಕೂಡ ಇಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲಿಸ ದಾಖಲೆಗಳ ಆಧಾರದ ಮೇಲೆ ಅಪಘಾತಪಡಿಸಿದ ವಾಹನವು ಎಲ್ಲಿಂದ ಎಲ್ಲಿಗೆ ಹೊರಟಿತ್ತು ಎಂದು ನನಗೆ ಮಾಹಿತಿ

ಇರುವುದಿಲ್ಲ. ಅಪಘಾತಪಡಿಸಿದ ವಾಹನ ಇಲಕಲ್ಲ ಎಪಿಎಮ್‌ಸಿ ಯಲ್ಲಿ ತೊಗರಿ ಲೋಡ ಮಾಡಿಕೊಂಡು ಬಾಗಲಕೋಟ ಕಡೆಗೆ ಹೊರಟಿತ್ತು ಎಂದರೆ ಸರಿಯಲ್ಲ. ಅಪಘಾತವಾದ ದಿನ ಅಪಘಾತವಾದ ನಂತರ ಅಪಘಾತಪಡಿಸಿದ ವಾಹನದಲ್ಲಿದ್ದ ತೊಗರಿ ಅಪಘಾತದ ಜಾಗೆಯಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದಿತ್ತು ಎಂದರೆ ಸರಿಯಲ್ಲ. ಈ ಕುರಿತು ಪೋಲಿಸ ತನಿಖಾಧಿಕಾರಿಯು ಅಪಘಾತ ವಿವರದಲ್ಲಿ ನಮೂದಿಸಿರುತ್ತಾರೆ ಎಂದರೆ ಸಾಕ್ಷಿದಾರರು ಅದು ಸುಳ್ಳು ಇರುತ್ತದೆ ಎಂದು ಹೇಳುತ್ತಾರೆ. ಅಪಘಾತ ಪಡಿಸಿದ ವಾಹನದ ಚಾಲಕನು ಇಲಕಲ್ಲ ಎಪಿಎಮ್‌ಸಿ ಯಿಂದ ಅಪಘಾತ ಪಡಿಸಿದ ಜಾಗೆಯ ವರಗೆ ವಾಹನವನ್ನು 22 ಕಿ.ಮೀಗಳ ವರೆಗೆ ಚಲಾಯಿಸಿಕೊಂಡು ಬಂದಿದ್ದರು ಎಂದರೆ ಸಾಕ್ಷಿದಾರರು ದೋಷಾರೊಪಣಾ ಪಟ್ಟಿಯಲ್ಲಿ ನಮೂದಿಸಿದ ಚಾಲಕನು ಅಪಘಾತಪಡಿಸಿದ ವಾಹನವನ್ನು ಚಲಾಯಿಸಿಕೊಂಡು ಹೋಗುತ್ತಿದ್ದ ಎಂದು ಹೇಳುತ್ತಾರೆ. ಇಲಕಲ್ಲ ಎಪಿಎಮ್‌ಸಿ ಯಿಂದ ಇಲಕಲ್ಲ, ಹುನಗುಂದ ಮಾರ್ಗವಾಗಿ ಅಪಘಾತ ಪಡಿಸಿದ ವಾಹನವನ್ನು ಚಲಾಯಿಸಿಕೊಂಡು ಬರುತ್ತಿದ್ದ ಎಂದರೆ ಸಾಕ್ಷಿದಾರರು ಈ ಕುರಿತು ನನಗೆ ಹೇಳಲು ಬರುವುದಿಲ್ಲ ಎಂದು ಹೇಳುತ್ತಾರೆ. ಅಪಘಾತಪಡಿಸಿದ ಚಾಲಕನು ಅಪಘಾತದ ಜಾಗೆಗೆ ಬಂದಾಗ ಕತ್ತಲು ಆಗಿದ್ದರಿಂದ ಮುಂದೆ ಏನು ಕಾಣಲಾರದೆ ತನ್ನ ನಿರ್ಲಕ್ಷತನದಿಂದ ಅಪಘಾತ ಪಡಿಸಿರುತ್ತಾನೆ ಎಂದರೆ ಸರಿಯಲ್ಲ. ವಾಹನ ಚಾಲಕನು ತನಗೆ ವಾಹನ ಚಾಲನೆ ಮಾಡಲು ಬಂದಿದ್ದರಿಂದ 22 ಕಿ.ಮೀ ಗಳ ವರೆಗೆ ಸದರಿ ವಾಹನವನ್ನು ಚಲಾಯಿಸಿಕೊಂಡು ಬಂದಿದ್ದ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಪರಿಹಾರವನ್ನು ಕೊಡಬೇಕಾಗುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತಪಡಿಸಿದ ವಾಹನದ ಚಾಲಕನಿಂದ ಅಪಘಾತ ಸಂಭವಿಸಿದ್ದರಿಂದ ಪರಿಹಾರದ ಹಣವನ್ನು ಕೊಡಲು ನಾವು ಭಾದ್ಯಸ್ತರು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ )

ಓ. ಹೇ. ಕೇ. ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ, ಹುನಗುಂದ.